# ಮಹಾಸಭೆ : 1

ತಾ 25.04.76ನೇ ಭಾನುವಾರ ಮಧ್ಯಾಹ್ನ 3 ಗಂಟೆಗೆ ಗ್ರಾಮಭಾರತಿ ವಿದ್ಯಾಸಂಸ್ಥೆಯ ಮಹಾಸಭೆಯನ್ನು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಸನ್ಮಾನ್ಯ ಎಸ್.ಎಂ.ಲಿಂಗಪ್ಪ ಬಿ.ಎ.ಎಲ್.ಎಲ್.ಬಿ. ರವರ ಅಧ್ಯಕ್ಷತೆಯಲ್ಲಿ ನಡೆಸಿದ ಮೀಟಿಂಗ್ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಶಾಲಾ ಬಾಲಕಿಯರುಗಳಿಂದ ದೇವತಾ ಪ್ರಾರ್ಥನೆ ನಡೆಯಲ್ಪಟ್ಟಿತು. |
| 2. | ಸ್ವಾಗತ ಭಾಷಣ | ಎನ್. ಸಿದ್ದಲಿಂಗೇಗೌಡರು ಸಭಾಧ್ಯಕ್ಷರನ್ನು, ಆಡಳಿತ ಮಂಡಳಿ ಸದಸ್ಯರನ್ನು ಮತ್ತು ಸಭೆಗೆ ಬಂದಿರ ತಕ್ಕ ಸದಸ್ಯರುಗಳೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತ ಬಯಸಿದರು. |
| 3. | ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು | ಓದಿ ರೆಕಾರ್ಡ್ ಮಾಡಲು ಸರ್ವಾನುಮತದ ಒಪ್ಪಿಗೆ ನೀಡಿರುವುದನ್ನು ಅಂಗೀಕರಿಸಲಾಯಿತು. |
| 4. | 1974 ಮತ್ತು 75ನೇ ಸಾಲುಗಳ ಸಂಸ್ಥೆಯ ಆಡಿಟ್ ವರದಿಯನ್ನು ಪರಿಶೀಲಿಸಿ ಅಂಗೀಕರಿಸತಕ್ಕ ವಿಚಾರ | 1974–75 ಸಾಲುಗಳ ಆಡಿಟ್ ವರದಿಯನ್ನು ಸಭೆ ಮುಂದೆ ಓದಲಾಗಿ ಮಹಾಸಭೆಯ ಸದಸ್ಯರುಗಳು ಕೂಲಂಕುಶವಾಗಿ ಪರಿಶೀಲಿಸಿ ಒಪ್ಪಿ ಅಂಗೀಕರಿಸ ಬಹುದೆಂದು ತೀರ್ಮಾನಿಸಲಾಯಿತು. |
| 5. | 1976–77ನೇ ಸಾಲಿಗೆ ಬಡ್ಜೆಟ್ ಮಂಜೂ ರ್ಮಾಡತಕ್ಕ ವಿಚಾರ. | 1976–77ನೇ ಸಾಲಿಗೆ ಈ ಕೆಳಕಂಡಂತೆ ವಿದ್ಯಾಸಂಸ್ಥೆಗೆ ಖರ್ಚು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>ಅ. ಸಿಬ್ಬಂದಿ ಸಂಬಳ 35000<br>ಆ. ಪಿಠೋಪಕರಣಗಳಿಗೆ 10000<br>ಇ. ಪ್ರಯಾಣ ಖರ್ಚು 100<br>ಈ. ಅಂಚೆ ಖರ್ಚು 200<br>ಉ. ಪುಸ್ತಕ ಫಾರಂಗಳು 1000<br>ಊ. ವಿಜ್ಞಾನ ಉಪಕರಣಗಳು 2800 |

| | | |
|---|---|---|
| | | ಋ. ಮಹಾಸಭೆ ಖರ್ಚು 300<br>ಋ್ಊ. ಅತಿಥಿಸತ್ಕಾರ 100<br>ಎ. ಅನಿರೀಕ್ಷಿತ ವೆಚ್ಚಗಳು 500<br>50,000<br>ಒಟ್ಟು ಐವತ್ತು ಸಾವಿರ ರೂಪಾಯಿಗಳು |
| 6. | ಭಾಷಣಗಳು | ಶ್ರೀಯುತರುಗಳಾದ ಎನ್.ಗೋವಿಂದಶೆಟ್ರು, ಕಾರ್ಯದರ್ಶಿಯವರಾದ ಹೆಚ್.ಗೋವಿಂದಗೌಡರು, ತಹಸೀಲ್ದಾರ್ ರವರಾದ ಹೆಚ್.ತಿಮ್ಮಣ್ಣನವರು, ತಾಲೂಕಿನ ಅಸಿಸ್ಟೆಂಟ್ ಇಂಜಿನಿಯರ್ ರವರಾದ ತಿಮ್ಮೇಗೌಡರು ಮತ್ತು ಸಭಾಧ್ಯಕ್ಷತೆ ವಹಿಸಿರುವ ಸನ್ಮಾನ್ಯ ಎಸ್.ಎಂ.ಲಿಂಗಪ್ಪನವರು ಕೂಡ ಎಲ್ಲರೂ ಮಾತನಾಡುತ್ತಾ ಗ್ರಾಮಾಂತರದಿಂದ ಬರುವ ಮಕ್ಕಳುಗಳಿಗೆ, ನೈತಿಕ, ಆಧ್ಯಾತ್ಮಿಕ ಮತ್ತು ಶಿಸ್ತಿನ ವಿದ್ಯಾಭ್ಯಾಸದ ವಿಧಿ ವಿಧಾನಗಳನ್ನು ಅಳವಡಿಸಿಕೊಂಡು ಗ್ರಾಮದ, ರಾಜ್ಯದ ಮತ್ತು ರಾಷ್ಟ್ರದ ಉತ್ತಮ ಪ್ರಜೆಗಳಾಗಲು, ಉತ್ತಮವಾದ ಸಂಸ್ಥೆಯಾಗಿ ಬೆಳೆದು ಮಾದರಿ ಹಾಗೂ ಮೇಲ್ಪಂತಿಯಾದ ಸಂಸ್ಥೆಯಾಗಿ ಬೆಳೆಯಲು ಉದಾರವಾದ ಕೊಡುಗೆಯನ್ನು ಆರ್ಥಿಕವಾಗಿ ನೀಡಬೇಕೆಂದು ಸುದೀರ್ಘವಾಗಿ ಮಾತನಾಡಿದರು. |
| 7. | ವಂದನಾರ್ಪಣೆ | ಎನ್.ಸಿದ್ದಲಿಂಗೇಗೌಡರು ಸಭಾಧ್ಯಕ್ಷರಿಗೆ ಮತ್ತು ಹಾಜರಿದ್ದ ಸದಸ್ಯರುಗಳಿಗೆಲ್ಲರಿಗೂ ವಂದನಾರ್ಪಣೆ ಯನ್ನು ಸಲ್ಲಿಸಿದರು. |
| 8. | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಡನೆ ಸಭೆ ಭರಖಾಸ್ತು ಮಾಡಲಾಯಿತು. |

ಹಾಜರಿದ್ದ ಸದಸ್ಯರುಗಳು ಒಂದ ನೂರ ಐವತ್ತೆಂಟು (158)

## ಮಹಾಸಭೆ : 2 (ವಿಶೇಷ ಮಹಾಸಭೆ–1)

ತಾ 26.09.1976ನೇ ಭಾನುವಾರ ಬೆಳಿಗ್ಗೆ 11 ಘಂಟೆಗೆ ಗ್ರಾಮಭಾರತಿ ವಿದ್ಯಾಸಂಸ್ಥೆ ಕೃಷ್ಣರಾಜಪೇಟೆ ಇದರ ಸಕಲ ಸದಸ್ಯರ ವಿಶೇಷ ಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಎಂ.ಲಿಂಗಪ್ಪ ಬಿ.ಎ.ಎಲ್.ಎಲ್.ಬಿ. ರವರ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಸಭೆಯ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಶಾಲಾ ಬಾಲಕೀಯರುಗಳಿಂದ ದೇವತಾ ಪ್ರಾರ್ಥನೆ ನಡೆಯಲ್ಪಟ್ಟಿತು. |
| 2. | ಸ್ವಾಗತ ಭಾಷಣ | ಎನ್. ಸಿದ್ದಲಿಂಗೇಗೌಡರು ಸಭೆಯ ಅಧ್ಯಕ್ಷರನ್ನು, ಸದಸ್ಯ ಮಹನೀಯರುಗಳೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸಿದರು. |
| 3. | ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು | ಓದಿ ರೆಕಾರ್ಡು ಮಾಡಲಾಯ್ತು. |
| 4. | ಬೆಂಗಳೂರು ವಿಭಾಗದ ಆದಾಯ ತೆರಿಗೆ ಕಮೀಷನರ್ ರವರಿಂದ ಬಂದಿರುವ ಕರಡು ನಿಯಮಾವಳಿಗಳ ತಿದ್ದುಪಡಿಯ ವಿಚಾರ.<br><br>ಹಾಲಿ ಇರುವುದು<br><br>***Memorandum***<br>IV. Aims and objects<br>1) To create facilities for Primary secondary and university Education<br>2) To run students home.<br>3) To conduct residential Schools and Colleges.<br>4) To conduct vocational institutions.<br>5) To run such othe institutions as may be | ಈ ಕೆಳಕಂಡಂತೆ ಸಂಸ್ಥೆಯ ರಚನಾ ನಿಯಮಾವಳಿಗಳನ್ನು ತಿದ್ದುಪಡಿ ಮಾಡಬಹುದೆಂದು ತೀರ್ಮಾನಿಸಲಾಯ್ತು.<br><br>ತಿದ್ದುಪಡಿಯಾದ ನಂತರ ಇರುವುದು.<br><br>***Memorandum***<br>IV. Aims and objects<br>1) To create facilities for Primary secondary and university Education<br>2) To run students home.<br>3) To conduct residential Schools and Colleges.<br>4) To conduct vocational institutions.<br>5) To run such othe institutions as may be essential for the |

| | | |
|---|---|---|
| | essential for the furtherance of the aims and objects of the Society.<br>6) To undertake such development concerns as can be more purposeful and make effective and efficient by earning additional income.<br>***Constitution***<br>III. Aims and objects<br>1) To create facilities for Primary secondary and university Education<br>2) To run students home.<br>3) To conduct residential Schools and Colleges.<br>4) To conduct vocational institutions.<br>5) To run such othe institutions as may be essential for the furtherance of the aims and objects of the Society.<br>6) To undertake such development concerns as can be more purposeful and make effective and efficient by earning additional income.<br>XV. | furtherance of the aims and objects of the Society.<br>***Constitution***<br>III. Aims and objects<br>1) To create facilities for Primary secondary and university Education<br>2) To run students home.<br>3) To conduct residential Schools and Colleges.<br>4) To conduct vocational institutions.<br>5) To run such othe institutions as may be essential for the furtherance of the aims and objects of the Society.<br>***XV. Add a dissolution clause.***<br>In the event of dissolution or winding of the society the assets remaining as on the date of dissolution shall under no circumstances be distributed |

| | | |
|---|---|---|
| | | among the trustees/members of the managing committee/ member of the Governing body, but the same shall ve transferred to another Charitable Trust, Society, Association or institution whose objects are similar to those of the society. |
| 5. | ಅಧ್ಯಕ್ಷರ ಭಾಷಣ | ಸಭಾಧ್ಯಕ್ಷರು ಮಾತನಾಡುತ್ತ, ಸಂಸ್ಥೆಯಿಂದ ಸರಿಯಾದ ಶಿಕ್ಷಣ ಕೊಡುವುದರ ಮೂಲಕ ಮಕ್ಕಳ ಶಿಕ್ಷಣ, ಶಿಸ್ತು ನಿಯಮ ಮತ್ತು ನೀತಿ, ಇವುಗಳನ್ನು ರೂಡಿಸುವುದರ ಮೂಲಕ ಮುಂದಿನ ಜವಾಬ್ದಾರಿಯುತ ವ್ಯಕ್ತಿಗಳಾಗಿ, ಸಂಸಾರದ ಸಮಾಜದ ಮತ್ತು ದೇಶ ಸೇವೆ ಮಾಡುವಂತ: ಪ್ರಜೆಗಳಾಗಬೇಕೆಂದು ಹೇಳಿದರು. |
| 6. | ವಂದನಾರ್ಪಣೆ | ಸಂಸ್ಥೆಯ ಮುಖ್ಯೋಪಾಧ್ಯಾಯರಾದ ಲಕ್ಷ್ಮೀಪತಿ ಜೋಯಿಸರವರು ವಂದನಾರ್ಪಣೆ ಮಾಡಿದರು. |
| 7. | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಡನೆ ಸಭೆ ಭರಖಾಸ್ತು ಮಾಡಲಾಯಿತು. |

## ಮಹಾಸಭೆ : 3 (ವಿಶೇಷ ಮಹಾಸಭೆ–2)

ತಾರೀಖು 19.12.1976ನೇ ಭಾನುವಾರ ಮಧ್ಯಾಹ್ನ ಒಂದು ಘಂಟೆಗೆ ಗ್ರಾಮಭಾರತಿ ವಿದ್ಯಾಸಂಸ್ಥೆ ಕೃಷ್ಣರಾಜಪೇಟೆ ಇದರ ಸಕಲ ಸದಸ್ಯರ ವಿಶೇಷ ಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಎಂ.ಲಿಂಗಪ್ಪ ಬಿ.ಎ.ಎಲ್.ಎಲ್.ಬಿ. ರವರ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಸಭೆಯ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಶಾಲಾ ಬಾಲಕೀಯರುಗಳಿಂದ ದೇವತಾ ಪ್ರಾರ್ಥನೆ ನಡೆಯಲ್ಪಟ್ಟಿತು. |
| 2. | ಸ್ವಾಗತ ಭಾಷಣ | ಎನ್. ಸಿದ್ದಲಿಂಗೇಗೌಡರು ಸಭೆಯ ಅಧ್ಯಕ್ಷರನ್ನು, ಸದಸ್ಯ ಮಹನೀಯರುಗಳೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸಿದರು. |
| 3. | ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು | ಓದಿ ರೆಕಾರ್ಡು ಮಾಡಲಾಯ್ತು. |
| 4. | ಬೆಂಗಳೂರು ವಿಭಾಗದ ಆದಾಯ ತೆರಿಗೆ ಕಮೀಷನರ್ ರವರಿಂದ ಬಂದಿರುವ ಕರಡು ನಿಯಮಾವಳಿಗಳ ತಿದ್ದುಪಡಿಯ ವಿಚಾರ ಮತ್ತು ತಿದ್ದುಪಡಿಯನ್ನು ಅಂಗೀಕರಿಸುವ ವಿಚಾರ. | ತಾರೀಖು 26–9–76ನೇ ಭಾನುವಾರ ನಡೆದ ವಿಶೇಷ ಸಭೆಯಲ್ಲಿ ಸೂಚಿಸಲ್ಪಟ್ಟಿದ್ದ ತಿದ್ದುಪಡಿಯನ್ನು ಈ ದಿವಸ ಅಂಗೀಕರಿಸಲಾಯ್ತೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 5. | ಅಧ್ಯಕ್ಷರ ಭಾಷಣ | ಸಭಾಧ್ಯಕ್ಷರು ಮಾತನಾಡುತ್ತ, ಸಂಸ್ಥೆಯಿಂದ ಸರಿಯಾದ ಶಿಕ್ಷಣ ಕೊಡುವುದರ ಮೂಲ್ಕ ಮಕ್ಕಳ ಶಿಕ್ಷಣ, ಶಿಸ್ತು ನಿಯಮ ಮತ್ತು ನೀತಿ, ಇವುಗಳನ್ನು ರೂಢಿಸುವುದರ ಮೂಲ್ಕ ಮುಂದಿನ ಜವಾಬ್ಧಾರಿಯುತ ವ್ಯಕ್ತಿಗಳಾಗಿ, ಸಮಾಜದ ಮತ್ತು ದೇಶದ ಸೇವೆ ಮಾಡುವಂತ ಸತ್ಪ್ರಜೆಗಳಾಗಬೇಕೆಂದು ಹೇಳಿದರು. |
| 6. | ವಂದನಾರ್ಪಣೆ | ಸಂಸ್ಥೆಯ ಮುಖ್ಯೋಪಾಧ್ಯಾಯರಾದ ಲಕ್ಷ್ಮೀಪತಿ ಜೋಯ್ಸರು ವಂದನಾರ್ಪಣೆ ಮಾಡಿದರು. |
| 7. | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಡನೆ ಸಭೆ ಭರಖಾಸ್ತು ಮಾಡಲಾಯಿತು. |

(ಎಸ್.ಎಂ.ಲಿಂಗಪ್ಪ)

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ

ಕೃಷ್ಣರಾಜಪೇಟೆ

# ಮಹಾಸಭೆ: 4

ತಾರೀಖು 11.12.1977ನೇ ಭಾನುವಾರ ಮಧ್ಯಾಹ್ನ ಮೂರು ಘಂಟೆಗೆ ಗ್ರಾಮಭಾರತಿ ವಿದ್ಯಾಸಂಸ್ಥೆ ಕೃಷ್ಣರಾಜಪೇಟೆ ಇದರ 1975–76ನೇ ಸಾಲಿನ ಸಕಲ ಸದಸ್ಯರ ವಿಶೇಷ ಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ಶ್ರೀಮಾನ್ ಎಸ್.ಎಂ.ಲಿಂಗಪ್ಪ ಬಿ.ಎ.ಎಲ್.ಎಲ್.ಬಿ. ರವರ ಘನ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಶಾಲಾ ಬಾಲಕ ಚಿ॥ ಎಂ.ನಾಗರಾಜನಿಂದ ದೇವತಾ ಪ್ರಾರ್ಥನೆಯಾಯಿತು. |
| 2. | ಸ್ವಾಗತ ಭಾಷಣ (ಎನ್.ಸಿದ್ದಲಿಂಗೇಗೌಡರಿಂದ) | ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯಶ್ರೀ ಎಸ್.ಎಂ.ಲಿಂಗಪ್ಪ ಬಿ.ಎ.ಎಲ್.ಎಲ್.ಬಿ ರವರನ್ನು ಆಡಳಿತ ಮಂಡಳಿಯ ಸದಸ್ಯರನ್ನು ಹಾಗೂ ಸಭೆಗೆ ಆಗಮಿಸಿದ್ದ ಸಂಸ್ಥೆಯ ಸದಸ್ಯರೆಲ್ಲರನ್ನೂ ಸಭೆಗೆ ಹೃತ್ಪೂರ್ವಕವಾಗಿ ಶ್ರೀ ಎನ್. ಸಿದ್ದಲಿಂಗೇಗೌಡರು ಸ್ವಾಗತಿಸಿದರು. |
| 3. | ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು | ಓದಿ ರೆಕಾರ್ಡು ಮಾಡಲಾಯ್ತು. |
| 4. | 1975–76ನೇ ಸಾಲಿನ ಸಂಸ್ಥೆಯ ಆಡಿಟರ್ ರವರಿಂದ ಪರಿಶೋಧಿಸಲ್ಪಟ್ಟ ಲೆಕ್ಕ–ಪತ್ರಗಳನ್ನು ಅಂಗೀಕರಿಸತಕ್ಕ ವಿಚಾರ. | ಅಂಗೀಕರಿಸಲಾಯ್ತು. |
| 5. | 1976–77ನೇ ಸಾಲಿಗೆ ಬಡ್ಜೆಟ್ ಮಂಜೂರ್ಮಾಡತಕ್ಕ ವಿಚಾರ. | 1976–77ನೇ ಸಾಲಿಗೆ ಈ ಕೆಳಕಂಡಂತೆ ಬಡ್ಜೆಟ್ ಮಂಜೂರ್ಮಾಡತಕ್ಕದೆಂದು ತೀರ್ಮಾನಿಸಲಾಯ್ತು.<br>1. ಸಿಬ್ಬಂದಿ ಸಂಬಳ 50,000–00<br>2. ಪೀಠೋಪಕರಣ 5,000–00<br>3. ಪ್ರಯಾಣದ ಖರ್ಚು 200–00<br>4. ಅಂಚೆ ವೆಚ್ಚ 400–00<br>5. ಪುಸ್ತಕ ಫಾರಂಗಳು 2,000–00<br>6. ವಿಜ್ಞಾನ ಉಪಕರಣಗಳು 3,000–00 |

| | | |
|---|---|---|
| | | 7. ಮಹಾಸಭೆಯ ಖರ್ಚು 400–00<br>8. ಅತಿಥಿ ಸತ್ಕಾರ 200–00<br>9. ಅನಿರೀಕ್ಷಿತ ವೆಚ್ಚಗಳು 750–00<br>ಒಟ್ಟು 61,950–00 |
| 6. | ಸಂಸ್ಥೆಯ 76–77ನೇ ಸಾಲಿಗೆ ಕಾರ್ಯ ನಿರ್ವಾಹಕ ಮಂಡಲಿ ಚುನಾವಣೆ | ಸಂಸ್ಥೆಯ 76–77ನೇ ಸಾಲಿನ ಕಾರ್ಯ ನಿರ್ವಾಹಕ ಮಂಡಲಿಯ ಸದಸ್ಯರುಗಳನ್ನು ಆರಿಸಿಕೊಳ್ಳುವ ಹಕ್ಕನ್ನು ಸಂಸ್ಥೆಯ ಅಧ್ಯಕ್ಷರಿಗೆ ನೀಡತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 7. | ಭಾಷಣಗಳು | ಸಂಸ್ಥೆಯ ಸದಸ್ಯರೊಬ್ಬರಲ್ಲಾದ ಡಾ॥ ಶ್ರೀನಿವಾಸ್ ಸಂಸ್ಥೆಯ ಪುರೋಭಿವೃದ್ದಿಗಾಗಿ ವಿಸ್ತರಣಾ ಕಾರ್ಯಗಳನ್ನ ಕೈಗೊಳ್ಳಬೇಕೆಂದು ಸಲಹೆ ಮಾಡಿದರು. |
| 8. | ಅಧ್ಯಕ್ಷರ ಭಾಷಣ | ಸಂಸ್ಥೆಯ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಶ್ರೀಮಾನ್ ಎಸ್.ಎಂ. ಲಿಂಗಪ್ಪನವರು ಗ್ರಾಮೀಣ ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯಾಭ್ಯಾಸ ಅನುಕೂಲ ಕಲ್ಪಿಸಿ ಕೊಡಬೇಕೆಂಬ ಸದುದ್ದೇಶದಿಂದ ಈ ಸಂಸ್ಥೆಯು ಸ್ಥಾಪಿತವಾಗಿರುವುದನ್ನು ಹೇಳುತ್ತಾ, ಸಂಸ್ಥೆಯ ನಿರ್ವಹಣೆಗಾಗಿ ಇರತಕ್ಕ ಕಷ್ಟಗಳನ್ನು ಮತ್ತು ಅದರ ಪುರೋಭಿವೃದ್ಧಿಗಾಗಿ ಹಾಕಿಕೊಳ್ಳಬೇಕಾದ ಕಾರ್ಯಕ್ರಮ ಗಳನ್ನ ಸದಸ್ಯರಿಗೆ ತಿಳಿಸಿದರು.<br>ಸಂಸ್ಥೆಗೆ ಬೇಕಾಗುವ ಕಟ್ಟಡ ಮತ್ತು ಆಟದ ಮೈದಾನಗಳಿಗಾಗಿ ನಿವೇಶನವನ್ನು ಪಡೆಯಲು ಪ್ರಾರಂಬಿಕ ಕಾರ್ಯಕ್ರಮಗಳನ್ನು ಕೈಗೊಂಡಿರುವುದನ್ನು ವಿವರಿಸಿದರು. ಸಂಸ್ಥೆಯ ಕಟ್ಟಡ ನಿವೇಶನಗಳಿಗಾಗಿಯೂ ಮತ್ತು ಸಂಸ್ಥೆಯು ನಡೆಸುತ್ತಿರುವ ಪ್ರೌಢಶಾಲೆಯ ಸಿಬ್ಬಂದಿ ವರ್ಗಕ್ಕೆ ಬೇಕಾಗಿರುವ ಧನ ಸಹಾಯ ಮತ್ತು ಸಹಕಾರವನ್ನು ಕೋರುತ್ತಾ ತಹಲ್ ವರೆವಿಗೂ ಸಂಸ್ಥೆಗೆ |

| | | |
|---|---|---|
| | | ಧನ ಸಹಾಯ ಮತ್ತು ಸಹಕಾರ ನೀಡಿರತಕ್ಕ ಸದಸ್ಯರಿಗೂ ಮತ್ತು ಸಾರ್ವಜನಿಕರಿಗೂ ಕೃತಜ್ಞತೆ ಅರ್ಪಿಸುತ್ತಾ ತಮ್ಮ ಅಧ್ಯಕ್ಷ ಭಾಷಣವನ್ನ ಮುಗಿಸಿದರು. |
| 9. | ವಂದನಾರ್ಪಣೆ | ಸದಸ್ಯ ಶ್ರೀ ಕೃಷ್ಣಮೂರ್ತಿ ಕುಪ್ಪಹಳ್ಳಿ ಇವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯಶ್ರೀ ಎಸ್.ಎಂ. ಲಿಂಗಪ್ಪ ನವರಿಗೂ ಮತ್ತು ಆಡಳಿತ ಮಂಡಳಿ ಸದಸ್ಯರಿಗೂ ಮತ್ತು ಸದಸ್ಯರಿಗೂ ಸಭೆಗೆ ಆಗಮಿಸಿ ಕಾರ್ಯ ಕಲಾಪಗಳು ಸುಸೂತ್ರವಾಗಿ ನಡೆಯಲು ಸಹಕಾರ ನೀಡಿದುದಕ್ಕಾಗಿ ವಂದಿಸಿದರು. |
| 7. | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಡನೆ ಸಭೆ ಭರಖಾಸ್ತು ಮಾಡಲಾಯ್ತು. |

(ಎಸ್.ಎಂ.ಲಿಂಗಪ್ಪ)

Presiding

11/12/77

# ಮಹಾಸಭೆ: 5

ತಾರೀಖು 3.6.80ರ ಮಂಗಳವಾರ ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಗ್ರಾಮಭಾರತಿ ವಿದ್ಯಾಸಂಸ್ಥೆಯ ಮಹಾಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಸ್.ಎಂ. ಲಿಂಗಪ್ಪ ಬಿ.ಎ.ಎಲ್.ಎಲ್.ಬಿ.ಎಂ.ಎಲ್.ಎ. ಇವರ ಘನ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಶಾಲಾ ಬಾಲಕಿಯರಿಂದ ದೇವತಾ ಪ್ರಾರ್ಥನೆ ನಡೆಸಲ್ಪಟ್ಟಿತು. |
| 2. | ಸ್ವಾಗತ ಭಾಷಣ | ಶ್ರೀ ಎನ್. ಸಿದ್ದಲಿಂಗೇಗೌಡರವರು, ಸಭಾಧ್ಯಕ್ಷರನ್ನೂ, ಆಡಳಿತ ಮಂಡಳಿ ಸದಸ್ಯರುಗಳನ್ನು ಮತ್ತು ಸಭೆಗೆ ಬಂದಿರತಕ್ಕ ಸದಸ್ಯರುಗಳೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತ ಬಯಸಿದರು. |
| 3. | ಸಕಲ ಸದಸ್ಯರ ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು | ಓದಿ ರಿಕಾರ್ಡು ಮಾಡಲಾಯ್ತು. |
| 4. | 1977, 1978 ಮತ್ತು 1979 ನೇ ಸಾಲುಗಳ ಸಂಸ್ಥೆಯ ಆಡಿಟ್ ರವರ ವರದಿಯನ್ನು ಪರಿಶೀಲಿಸಿ ಅಂಗೀಕರಿಸತಕ್ಕ ವಿಚಾರ. | 1977, 1978 ಮತ್ತು 1979 ನೇ ಸಾಲುಗಳ ಸಂಸ್ಥೆಯ ಆಡಿಟ್ ರವರ ವರದಿಯನ್ನು ಸಭೆಯ ಮುಂದೆ ಓದಲಾಗಿ ಮಹಾಸಭೆಯ ಸದಸ್ಯರುಗಳು ಕೂಲಂಕುಶವಾಗಿ ಪರಿಶೀಲಿಸಿ ಅಂಗೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 5. | 1979 ನೇ ಸಾಲಿನ ಆಡಿಟರವರ ವರದಿಯಲ್ಲಿ ಕಂಡ ಅಖೈರು ಶುಲ್ಕ ಮೊಬಲಗು ರೂ.5549–00 ಪೈಗಳು ಇರುವುದಾಗಿ ವರದಿಯಾಗಿದ್ದು, ಈ ಹಣ, ಶುಲ್ಕಗಳು ರಶೀತಿ ಪಡೆದು ಹಣ ಪಾವತಿಸದೆ ಇರುವುದರಿಂದ ಇದನ್ನ ಮನ್ನ ಮಾಡತಕ್ಕ ವಿಚಾರ. | 1979 ನೇ ಸಾಲಿನ ಆಡಿಟರವರ ವರದಿಯಲ್ಲಿ ಕಂಡ ಅಖೈರು ಮೊಬಲಗು 5549–00 ರೂ. ಗಳು ಇರದೆ ಇರುವುದು, ಕುಳಗಳು ರಶೀತಿ ಪಡೆದು ಹಣ ಪಾವತಿಸದೆ ಇವರ ಬಗ್ಗೆ ಲಿಖಿತ ಹೇಳಿಕೆ ಕೊಟ್ಟಿರುವುದರಿಂದ, ಈ ಮೊಬಲಗನ್ನು ಮನ್ನಾ ಮಾಡಬಹುದೆಂದು ಒಪ್ಪಿಗೆ ನೀಡಿ ಸರ್ವಾನುಮತದಿಂದ ಅಂಗೀಕರಿಸಬಹುದೆಂದು ತೀರ್ಮಾನಿಸಲಾಯ್ತು. |

| | | |
|---|---|---|
| 6. | 1980–81ನೇ ಸಾಲಿಗೆ ಬಡ್ಜೆಟ್ ಮಂಜೂರ್ಮಾಡತಕ ವಿಚಾರ. | 1980–81ನೇ ಸಾಲಿಗೆ ಈ ಕೆಳಕಂಡಂತೆ ವಿದ್ಯಾಸಂಸ್ಥೆಗೆ ಖರ್ಚುಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು.<br>1. ಸಿಬ್ಬಂದಿ ಸಂಬಳ (matching grant) 25,000–00<br>2. ಪೀಠೋಪಕರಣ 5,000–00<br>3. ಪ್ರಯಾಣದ ಖರ್ಚು 200–00<br>4. ಅಂಚೆ ವೆಚ್ಚ 400–00<br>5. ಪುಸ್ತಕ ಮತ್ತು ಫಾರಂಗಳು 2,800–00<br>6. ವಿಜ್ಞಾನ ಉಪಕರಣಗಳು 5,000–00<br>7. ಮಹಾಸಭೆಯ ಖರ್ಚು 400–00<br>8. ಅತಿಥಿ ಸತ್ಕಾರ 200–00<br>9. ಅನಿರೀಕ್ಷಿತ ವೆಚ್ಚಗಳು 1,000–00<br>10. ಜಾಹಿರಾತುಗಳು 1,000–00<br>ಒಟ್ಟು 41,000–00 |
| 7. | ಸಂಸ್ಥೆಯ ಕಾರ್ಯ ನಿರ್ವಾಹಕ ಮಂಡಲಿ ಚುನಾವಣೆ | ಹಿಂದೆ ಇದ್ದ ಸದಸ್ಯರುಗಳೇ ಈ ಸಾಲಿಗೂ ಸಹ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳಾಗಿ ಮುಂದುವರಿಯತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. ಶ್ರೀಯುತರಾದ ಎಸ್.ಎಂ. ಲಿಂಗಪ್ಪನರು ಅಧ್ಯಕ್ಷರಾಗಿಯೂ ಮತ್ತು ಜಿ. ನಾರಾಯಣ ಶೆಟ್ಟರು ಕಾರ್ಯದರ್ಶಿಯಾಗಿ ತೀರ್ಮಾನಿಸಲಾಯ್ತು. |
| 7. | ಅಧ್ಯಕ್ಷರ ಭಾಷಣ | ಅಧ್ಯಕ್ಷರು ಭಾಷಣ ಮಾಡುತ್ತಾ, ಸಾರ್ವಜನಿಕರು ಉದಾರವಾಗಿ ಧನಸಹಾಯ ಮಾಡಿ ಶಾಲಾ ಕಟ್ಟಡ ನಿರ್ಮಾಣ ಜರೂರಾಗಿ ಆಗಲು ಸಹಕರಿಸಬೇಕೆಂದು ಸರ್ವರನ್ನೂ ಪ್ರಾರ್ಥಿಸಿದರು. |

| | | |
|---|---|---|
| 8. | ವಂದನಾರ್ಪಣೆ | ಶ್ರೀ ಜಿ. ನಾರಾಯಣಶೆಟ್ಟರು ಬಂದಿದ್ದವರೆಲ್ಲರಿಗೂ ವಂದನಾರ್ಪಣೆ ಮಾಡಿದರು. |
| 9. | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಡನೆ ಸಭೆ ಭರಕಾಸ್ತು ಮಾಡಲಾಯ್ತು. |

(ಎಸ್.ಎಂ. ಲಿಂಗಪ್ಪ)

President

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ.

ಕೃಷ್ಣರಾಜಪೇಟೆ.

## ಮಹಾಸಭೆ: 6

ತಾರೀಖು 8.11.81ರ ಭಾನುವಾರ ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಗ್ರಾಮಭಾರತಿ ವಿದ್ಯಾಸಂಸ್ಥೆಯ ಮಹಾಸಭೆಯು ಸಂಸ್ಥೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಸ್.ಎಂ. ಲಿಂಗಪ್ಪ ಬಿ.ಎ. ಎಲ್.ಎಲ್.ಬಿ., ಎಂ.ಎಲ್.ಎ. ಇವರ ಘನ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು: –

| | ವಿಷಯ | ತೀರ್ಮಾನ |
|---|---|---|
| 1. | ದೇವತಾ ಪ್ರಾರ್ಥನೆ | ಶಾಲಾ ಬಾಲಕೀಯರುಗಳಿಂದ ದೇವತಾ ಪ್ರಾರ್ಥನೆ ಮಾಡಲ್ಪಟ್ಟಿತು. |
| 2. | ಸ್ವಾಗತ ಭಾಷಣ | ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾದ ಎನ್. ಸಿದ್ದಲಿಂಗೇಗೌಡ ಇವರು, ಸಭಾಧ್ಯಕ್ಷರನ್ನೂ, ಆಗಮಿಸಿರತಕ್ಕಂತ ಸದಸ್ಯರುಗಳನ್ನು, ಉಪಾಧ್ಯಯ ವರ್ಗದವರನ್ನು ಮತ್ತು ಇತರೆ ಸಾರ್ವಜನಿಕರುಗಳನ್ನು ಆತ್ಮೀಯವಾಗಿ ಸುಸ್ವಾಗತ ಬಯಸಿದರು. |
| 3. | ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು | ಸರ್ವ ಸದಸ್ಯರ ಸಭೆಯಲ್ಲಿ ಆಹ್ವಾನ ಪತ್ರಿಕೆಯನ್ನು ಓದಿದ ಬಗ್ಗೆ ಮಹಾಸಭೆಯು ಒಪ್ಪಿ ಅಂಗೀಕರಿಸಬಹುದೆಂದು ತೀರ್ಮಾನಿಸಲಾಯ್ತು. |
| 4. | ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವುದು. | ರಿಕಾರ್ಡು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 5. | 1979–80 ನೇ ಸಾಲಿನ ಲೆಖ್ಖ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸತಕ್ಕ ವಿಚಾರ. | ಮಹಾಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರುಗಳು ಲೆಖ್ಖ ಪರಿಶೋಧಕರ ವರದಿಯನ್ನು ಕೂಲಂಕುಶವಾಗಿ ಪರಿಶೀಲಿಸಿ ಅಂಗೀಕರಿಸಬಹುದೆಂದು ಸರ್ವಾನುಮತ ದಿಂದ ತೀರ್ಮಾನಿಸಲಾಯ್ತು. |
| 6. | 1981–82 ನೇ ಸಾಲಿಗೆ ಬಡ್ಜೆಟ್ ಮಂಜೂರ್ಮಾಡತಕ್ಕ ವಿಚಾರ. | 1981–82 ನೇ ಸಾಲಿಗೆ ಬಡ್ಜೆಟ್ ಮಂಜೂರ್ಮಾಡ ಬಹುದೆಂದು ಸರ್ವಾನುಮತದಿಂದ ತೀರ್ಮಾನಿಸ ಲಾಯ್ತು.<br>1. ಸಿಬ್ಬಂದಿ ಸಂಬಳ 10,000–00<br>(matching grant)<br>2. ಪೀಠೋಪಕರಣ 5,000–00 |

| | | |
|---|---|---|
| | | 3. ವಿಜ್ಞಾನ ಉಪಕರಣಗಳು 3,000–00<br>4. ಪುಸ್ತಕ ಮತ್ತು ಫಾರಂಗಳು 5,000–00<br>5. ಮಹಾಸಭೆಯ ಖರ್ಚು 400–00<br>6. ಪ್ರಯಾಣ ಭತ್ಯೆ 200–00<br>7. ಅಂಚೆ ವೆಚ್ಚ 400–00<br>8. ಅತಿಥಿ ಸತ್ಕಾರ 200–00<br>9. ಅನಿರೀಕ್ಷಿತ ವೆಚ್ಚಗಳು 1,000–00<br>10. ಜಾಹಿರಾತುಗಳು 500–00<br>ಒಟ್ಟು 25,700–00<br>ಜುಮ್ಲಾ ಇಪ್ಪತ್ತೈದು ಸಾವಿರದ ಏಳುನೂರು ರೂ. ಗಳು |
| 7. | ಸಂಸ್ಥೆಯ ಕಾರ್ಯ ನಿರ್ವಾಹಕ ಮಂಡಲಿಯ ಸದಸ್ಯರುಗಳ ಚುನಾವಣೆ | ಸಂಸ್ಥೆಯ ಅಧ್ಯಕ್ಷರ ಜವಾಬ್ದಾರಿಗೆ ಬಿಡತಕ್ಕದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 8. | ಭಾಷಣಗಳು | ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾದ ಹೆಚ್. ಗೋವಿಂದಗೌಡರು ಪ್ರೌಢಶಾಲೆಯ ಕಟ್ಟಡ ಮತ್ತು ಕಾಲೇಜು ಆಗುವ ಮಟ್ಟಕ್ಕೆ ಉದಾಋವಾಗಿ ಹಣ ಮತ್ತು ಸಹಕಾರ ನೀಡಬೇಕಾಗಿ ಪ್ರಾರ್ಥಿಸಿ ಭಾಷಣ ಮಾಡಿದರು. |
| 9. | ಸಭಾಧ್ಯಕ್ಷರ ಭಾಷಣ | ಸಭಾಧ್ಯಕ್ಷರು ಮಾತನಾಡುತ್ತಾ ಗ್ರಾಮಾಂತರಗಳಿಂದ ಬಂದ ಮಕ್ಕಳ ಉತ್ತಮ ಶಿಕ್ಷಣಕ್ಕಾಗಿ ಸರ್ವರೂ ಸಹಕಾರ ನೀಡಬೇಕೆಂದು ಹೇಳಿದರು. |
| 10. | ವಂದನಾರ್ಪಣೆ | ಕಾರ್ಯದರ್ಶಿಯವರಾದ ಜಿ. ನಾರಾಯಣಶೆಟ್ಟರು ಸಭಾಧ್ಯಕ್ಷರಿಗೂ, ಸನ್ಮಾನ್ಯ ಸದಸ್ಯರುಗಳೆಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು. |
| 11. | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಡನೆ ಸಭೆ ಭರಖಾಸ್ತು ಮಾಡಲಾಯ್ತು. |

(ಎಸ್.ಎಂ. ಲಿಂಗಪ್ಪ)

8-11-81

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ.

ಕೃಷ್ಣರಾಜಪೇಟೆ.

## ಮಹಾಸಭೆ: 7

ತಾರೀಖು 10.10.1982 ರ ದಿನಾಂಕ ಭಾನುವಾರ ಬೆಳಿಗ್ಗೆ 11 ಘಂಟೆಗೆ ಸರಿಯಾಗಿ ಗ್ರಾಮಭಾರತಿ ವಿದ್ಯಾಸಂಸ್ಥೆಯ ಮಹಾಸಭೆಯು ಸಂಸ್ಥೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಸ್.ಎಂ. ಲಿಂಗಪ್ಪ ಬಿ.ಎ. ಎಲ್.ಎಲ್.ಬಿ., ಎಂ.ಎಲ್.ಎ. ಇವರ ಘನ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು–

| | ವಿಷಯ | ತೀರ್ಮಾನ |
|---|---|---|
| 1. | ಪ್ರಾರ್ಥನೆ | ಶ್ರೀ ಆರ್. ಆರ್. ಸಿಗ್ಗಾವಿಯವರಿಂದ ದೇವತಾ ಪ್ರಾರ್ಥನೆ ಮಾಡಲ್ಪಟ್ಟಿತು. |
| 2. | ಸ್ವಾಗತ ಭಾಷಣ | ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರಾದ ಶ್ರೀ ಎಸ್. ಸಿ. ಚಿಕ್ಕಣ್ಣಗೌಡರು, ಸಭಾಧ್ಯಕ್ಷರನ್ನು ಆಗಮಿಸಿದ ಸದಸ್ಯರೆಲ್ಲರನ್ನು ಮತ್ತು ಶಾಲಾ ನೌಕರವರ್ಗದವರನ್ನು ಹಾಗೂ ಅಭಿಮಾನಿಗಳನ್ನು ಆತ್ಮೀಯವಾಗಿ ಸುಸ್ವಾಗತ ಬಯಸಿದರು. |
| 3. | ಆಹ್ವಾನ ಪತ್ರಿಕೆಯನ್ನು ಓದಿ ರೆಕಾರ್ಡ್ ಮಾಡುವುದು | ಸರ್ವ ಸದಸ್ಯರ ಸಭೆಯಲ್ಲಿ ಆಹ್ವಾನ ಪತ್ರಿಕೆಯನ್ನು ಓದಿದ ಬಗ್ಗೆ ಮಹಾಸಭೆಯು ಒಪ್ಪಿ ಅಂಗೀಕರಿಸಬಹುದೆಂದು ತೀರ್ಮಾನಿಸಲಾಯಿತು. |
| 4. | ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ರೆಕಾರ್ಡ್ ಮಾಡುವುದು | ರೆಕಾರ್ಡ್ ಮಾಡಬಹುದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 5. | 1980–81ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸತಕ್ಕ ವಿಚಾರ | ಮಹಾಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರುಗಳು ಲೆಕ್ಕಪರಿಶೋಧಕರ ವರದಿಯನ್ನು ಕೂಲಂಕುಶವಾಗಿ ಪರಿಶೀಲಿಸಿ ಅಂಗೀಕರಿಸಬಹುದೆಂದು ತೀರ್ಮಾನಿಸ ಲಾಯ್ತು. |
| 6. | 1981–82ನೇ ಸಾಲಿಗೆ ಮುಂಗಡ ಪತ್ರ ಮಂಜೂರು ಮಾಡತಕ್ಕ ವಿಚಾರ | ಈ ಕೆಳಕಂಡಂತೆ 1982–83 ನೇ ಸಾಲಿಗೆ ಮಂಜೂರಾತಿಗೆ ಮಂಡಿಸಿದ ಮುಂಗಡಪತ್ರವನ್ನು ಮಂಜೂರ್ ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |

| | | |
|---|---|---|
| | | 1. ಸಿಬ್ಬಂದಿ ಸಂಬಳ 10,000–00<br>2. ಮ್ಯಾಚಿಂಗ್ ಗ್ರಾಂಟ್ 5,000–00<br>3. ವಿಜ್ಞಾನ ಉಪಕರಣಗಳು 5,000–00<br>4. ಪುಸ್ತಕ ಭಂಡಾರ ಮತ್ತು ಫಾರಂಗಳು 5,000–00<br>5. ಮಹಾಸಭೆ ಖರ್ಚು 500–00<br>6. ಪ್ರಯಾಣ ಭತ್ಯೆ 500–00<br>7. ಅಂಚೆ ಬೆಚ್ಚ 500–00<br>8. ಅತಿಥಿ ಸತ್ಕಾರ 200–00<br>9. ಅನಿರೀಕ್ಷಿತ ವೆಚ್ಚಗಳು 1,000–00<br>10. ಜಾಹೀರಾತುಗಳು 500–00<br>28,200–00<br>ಬಾಂಮ್ಲಾ ಇಪ್ಪತ್ತೆಂಟು ಸಾವಿರದ ಎರಡು ನೂರು ರೂಪಾಯಿಗಳು. |
| 7. | ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರುಗಳ ಚುನಾವಣೆ. | ಸಂಸ್ಥೆಯ ಅಧ್ಯಕ್ಷರ ಜವಾಬ್ದಾರಿಗೆ ಬಿಡತಕ್ಕಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 8. | ಭಾಷಣಗಳು | 1. ಶ್ರೀಮಾನ್ ಎನ್. ಸಿದ್ದಲಿಂಗೇಗೌಡರು ಭಾಷಣ ಮಾಡಿ ಸಂಸ್ಥೆಯನ್ನು ಏಳಿಗೆ ತರಲು ಸರ್ವರೂ ತಮ್ಮ ಸಹಕಾರ ನೀಡಿ ಸಹಕರಿಸಬೇಕೆಂದು ಪ್ರಾರ್ಥಿಸಿದರು. ಶಾಲಾ ನೌಕರರು ಸಹ ಇನ್ನೂ ಉತ್ಸಾಹದಿಂದ ಶ್ರಮಿಸಬೇಕೆಂದು ಪ್ರಾರ್ಥಿಸಿದರು.<br>2. ಶ್ರೀ ಆರ್. ಸಿಗ್ಗಾವಿ ಅವರು ಭಾಷಣ ಮಾಡಿ ಸರ್ವಸ್ವವನ್ನು ತ್ಯಾಗ ಮಾಡಿ ಸದಾ ದೇಶ ಸೇವೆ ಮಾಡುತ್ತಿರುವ ಸಂಸ್ಥೆಯ ಅಧ್ಯಕ್ಷರಾದ ಮಹಾನ್ ವ್ಯಕ್ತಿಯಾದ ಶ್ರೀ ಎಸ್.ಎಂ. ಲಿಂಗಪ್ಪನವರಿಗೆ ಸದಸ್ಯರೆಲ್ಲರೂ ಸಹಾಯ ಹಸ್ತ ನೀಡಿ ತನ್ಮೂಲಕ ದೇಶ ಸೇವೆ ಮಾಡಿರೆಂದು ವಿನಂತಿಸಿಕೊಂಡು ತಮ್ಮ ಭಾಷಣ ಮುಗಿಸಿದರು.<br>3. ಶ್ರೀ ಹೆಚ್. ಜವರಿಗೌಡ್ರು ಮಹಾನ್ ವ್ಯಕ್ತಿ ಶ್ರೀಮಾನ್ ಎಸ್. ಎಂ. ಲಿಂಗಪ್ಪನವರು ಕಟ್ಟಿರುವ ಈ ಸಂಸ್ಥೆಯನ್ನು ಬೆಳೆಸಬೇಕೆಂದು ಸರ್ವರು ತಮ್ಮ ತಮ್ಮ ಶಕ್ತಾನುಸಾರ ಅಳಿಲು ಸೇವಾ ರೂಪದಲ್ಲಾದರೂ ಸೇವೆ ಮಾಡ ಬೇಕೆಂದು ಸರ್ವರಿಗೂ |

| | | |
|---|---|---|
| | | ಪ್ರಾರ್ಥಿಸಿಕೊಂಡು ತಮ್ಮ ಭಾಷಣ ಮಾಡುತ್ತಾ ಇವರ ರಚನಾತ್ಮಕ ಕಾರ್ಯವನ್ನು ಸರ್ವರೂ ಮೆಚ್ಚಬೇಕೆಂದು ನುಡಿದು ಸರ್ವರೂ ಇವರ ಕೆಲಸಕಾರ್ಯಗಳಲ್ಲಿ ಸದಾ ಸಹಕರಿಸಬೇಕೆಂದು ಎಲ್ಲರಲ್ಲೂ ಶ್ರೀಮಾನ್ ಹೆಚ್. ಜವರೆಗೌಡ್ರು, ಕಿರಿಯ ಕಾಲೇಜು ಉಪನ್ಯಾಸಕರು ತಮ್ಮ ಭಾಷಣ ಮುಗಿಸಿದರು. |
| 9. | ಅಧ್ಯಕ್ಷರ ಭಾಷಣ | ಸಭಾಧ್ಯಕ್ಷರು ಮಾತನಾಡುತ್ತಾ ಈ ಸಂಸ್ಥೆಯನ್ನು ಕಟ್ಟಿರುವ ಉದ್ದೇಶವೇನೆಂದರೆ ಸಂಸ್ಥೆಯು ಆದರ್ಶ ಸಂಸ್ಥೆಯಾಗಿ ಬೆಳೆಸಬೇಕು. ಇಲ್ಲಿ ಮಕ್ಕಳು ವಿದ್ಯಾವಂತರಾಗಿ ಹೋಗುವವರು. ಶ್ರೇಷ್ಠ ವರ್ಗದ ನಾಗರೀಕರಾಗಬೇಕು ಮತ್ತು ದೇಶಕ್ಕೆ ಉತ್ತಮ ಸೇವೆ ಸಲ್ಲಿಸತಕ್ಕಂಥವರಾಗಬೇಕು ಎಂದು ಮಾತನಾಡುತ್ತಾ ಸಂಸ್ಥೆಯ ಸದಸ್ಯರುಗಳಾದ ತಮ್ಮಿಂದ ಪ್ರಾರಂಭವಾದ ವಿದ್ಯಾಸಂಸ್ಥೆ ನಿಮ್ಮಿಂದಲೇ ಇದು ಪ್ರಭುದ್ಮಾಮಾನಕ್ಕೆ ಬರಬೇಕಾಗಿದೆ. ನಿಮ್ಮೆಲ್ಲರ ಸಹಕಾರ ಹಸ್ತದಿಂದ ಈ ಸಂಸ್ಥೆ ಬೆಳೆಗಬೇಕು. ಆದ್ದರಿಂದ ತಾವುಗಳೆಲ್ಲರೂ ಔಧಾರ್ಯದಿಂದ ಸಹಾಯ ಸಹಕಾರ ನೀಡಬೇಕೆಂದು ಕಳಕಳಿಯಿಂದ ಮನವಿ ಮಾಡಿದರು. |
| 10. | ವಂದನಾರ್ಪಣೆ | ಕಾರ್ಯದರ್ಶಿ ಶ್ರೀ ಜಿ. ನಾರಾಯಣ ಶೆಟ್ಟರು ಸಭಾಧ್ಯಕ್ಷರಿಗೂ, ಸರ್ವ ಸದಸ್ಯರುಗಳೆಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು. |
| 11. | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಡನೆ ಸಭೆಯನ್ನು ಭರಾಕಸ್ತು ಮಾಡಲಾಯ್ತು. |

(ಎಸ್.ಎಂ. ಲಿಂಗಪ್ಪ)

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ.

ಕೃಷ್ಣರಾಜಪೇಟೆ.

## ಮಹಾಸಭೆ: 8

ತಾರೀಖು 29.05.1983 ರ ದಿನಾಂಕ ಭಾನುವಾರ ಬೆಳಿಗ್ಗೆ 10 ಘಂಟೆಗೆ ಸರಿಯಾಗಿ ಗ್ರಾಮಭಾರತಿ ವಿದ್ಯಾಸಂಸ್ಥೆಯ ಮಹಾಸಭೆಯು ಸಂಸ್ಥೆಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಸ್.ಎಂ. ಲಿಂಗಪ್ಪ ಬಿ.ಎ. ಎಲ್.ಎಲ್.ಬಿ. ಇವರ ಘನ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು

| | ವಿಷಯ | ತೀರ್ಮಾನ |
|---|---|---|
| 1 | ಪ್ರಾರ್ಥನೆ | ಕುಮಾರಿ ಸಂಧ್ಯಾರಾಣಿಯಿಂದ ಪ್ರಾರ್ಥನೆಯಾಯಿತು. |
| 2 | ಸ್ವಾಗತಭಾಷಣ | ಕಾರ್ಯನಿರ್ವಾಹಕ ಸಮಿತಿ ಸದಸ್ಯರಾದ ಶ್ರೀ S.C ಚಿಕ್ಕಣ್ಣಗೌಡರು, ಸಭಾಧ್ಯಕ್ಷರನ್ನು ಸಭೆಗೆ ಆಗಮಿಸಿರುವ ಸದಸ್ಯರುಗಳನ್ನು ಹಾರ್ದಿಕವಾಗಿ ಸ್ವಾಗತಿಸಿದರು. |
| 3 | ಸಕಲ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರಿಕಾರ್ಡು ಮಾಡುವುದು. | ಆಹ್ವಾನ ಪತ್ರಿಕೆಯನ್ನು ಓದಲಾಯ್ತು. ರಿಕಾರ್ಡ್ ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 4 | ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಯನ್ನು ಓದಿ ರಿಕಾರ್ಡು ಮಾಡತಕ್ಕ ವಿಚಾರ. | ಓದಲಾಯ್ತು. ರಿಕಾರ್ಡು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 5 | 1981–82 ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 1981–82 ನೇ ಸಾಲಿನ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಪರಿಶೀಲಿಸಲಾಯ್ತು. ಇದನ್ನು ಅಂಗೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 6 | 1983–84 ನೇ ಸಾಲಿಗೆ ಬಡ್ಜೆಟ್ ಮಂಜೂರು ಮಾಡತಕ್ಕ ವಿಚಾರ. | ಈ ಕೆಳಕಂಡಂತೆ ಮಂಜೂರಾತಿಗಾಗಿ ಮಂಡಿಸಿರುವ ಬಡ್ಜೆಟ್‌ನ್ನು ಮಂಜೂರು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು.<br>1. ಸಿಬ್ಬಂದಿ ಸಂಬಳ 10,000=00<br>2. ಮ್ಯಾಚಿಂಗ್ ಗ್ರ್ಯಾಂಟ್ 5,000=00<br>3. ವಿಜ್ಞಾನ ಉಪಕರಣಗಳು 10,000=00 |

| | | |
|---|---|---|
| | | 4.ಪುಸ್ತಕ ಬಂಢಾರ ಮತ್ತು ಫಾರಂಗಳು 15,000=00<br>5. ಮಹಾಸಭೆ ಖರ್ಚು 500=00<br>6. ಪ್ರಯಾಣ ಭತ್ಯೆ 500=00<br>7. ಅಂಚೆ ವೆಚ್ಚ. 200=00<br>8. ಅತಿಥಿ ಸತ್ಕಾರ 1,000=00<br>9. ಅನಿರೀಕ್ಷಿತ ವೆಚ್ಚಗಳು 1,000=00<br>10. ಜಾಹಿರಾತುಳು 500=00<br>**ಜುಮ್ಲಾ 43,200=00**<br>ಜುಮ್ಲಾ ನಲವತ್ತ ಮೂರು ಸಾವಿರದ ಎರಡು ನೂರು ರೂಪಾಯಿಗಳ ಬಡ್ಜೆಟ್ ನ್ನು ಮಂಜೂರು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 7 | ಸಂಸ್ಥೆಯ ಕಾರ್ಯನಿರ್ವಹಕ ಮಂಡಲಿಯ ಚುನಾವಣೆ | ಸಂಸ್ಥೆಯ ಅಧ್ಯಕ್ಷರ ಜವಾಬ್ಧಾರಿಗೆ ಬಿಟ್ಟು ಸೂಕ್ತರಾದವರನ್ನು ಕಾರ್ಯನಿರ್ವಾಹಕ ಮಂಡಲಿಗೆ ನೇಮಿಸಿಕೊಳ್ಳತಕ್ಕದೆಂದು ಸಭೆಯು ಅಭಿಪ್ರಾಯಪಟ್ಟು ಅದರಂತೆ ಸಂಘದ ಅಧ್ಯಕ್ಷರಿಗೆ ಪೂರ್ಣ ಅಧಿಕಾರ ನೀಡತಕ್ಕದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 8 | ಭಾಷಣಗಳು | 1.ಸಂಸ್ಥೆಯ ಸದಸ್ಯರಾದ ಶ್ರೀ.ಎಸ್.ಸಿದ್ದಲಿಂಗೇಗೌಡರು ಮಾತನಾಡುತ್ತಾ ಈ ಸಂಸ್ಥೆಯನ್ನು ಕಟ್ಟಲು ಶ್ರಮವಹಿಸಿದ ಶ್ರೀ.ಎಸ್.ಎಂ. ಲಿಂಗಪ್ಪನವರ ಸೇವೆಯನ್ನ ತುಂಬು ಹೃದಯದಿಂದ ಶ್ಲಾಘಿಸಿ ಈ ಸಂಸ್ಥೆಯ ಉನ್ನತ ಮಟ್ಟದಲ್ಲಿ ನಡೆಯಲೆಂದು ಹಾರೈಸಿಸದರು. ಸಂಸ್ಥೆಗೆ ಸಹಾಯ ಮಾಡಿರುವ, ಮಾಡುತ್ತಿರುವ ಮಹಾಶಯರ್‌ಗಳನ್ನು ವಂದಿಸಿ ಇನ್ನು ಮುಂದೆಯು |

| | | |
|---|---|---|
| | | ಇದರಂತೆ ಧನ ಸಹಾಯ ಮಾಡಬೇಕೆಂದು ಕೋರಿದರು.<br>2.ನಿವೃತ್ತ ಅಧ್ಯಾಪಕರಾದ ಶ್ರೀ.ಎಸ್. ಗೋವಿಂದಶೆಟ್ಟರು ಭಾಷಣ ಮಾಡುತ್ತಾ ಈ ಸಂಸ್ಥೆಯು ಮಾದರಿ ಸಂಸ್ಥೆಯಾಗಿ ಕೆಲಸ ಮಾಡುತ್ತಿರುವುದನ್ನು ಪ್ರಶಂಸಿದರು. ಅಧ್ಯಾಪಕರಾಗಿ ಅವರು ಶಾಲೆಯ ಕುಂದುಕೊರತೆಗಳನ್ನು ಮನಗೊಂಡು ಬೇರೆ ಶಾಲೆಗಳಿಗೆ ಈ ಶಾಲೆಯನ್ನು ಹೋಲಿಸಿ ಇದೊಂದು ಉತ್ತಮ ಸಂಸ್ಥೆ ಎಂದು ಇಲ್ಲಿ ದೊರೆಯುತ್ತಿರುವ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಬೇರೆಲ್ಲಿಯೂ ಸಹ ದೊರೆಯುತ್ತಿಲ್ಲವೆಂದು ತಿಳಿಸಿ ಇದು ರಾಷ್ಟ್ರದಲ್ಲಿಯೇ ಉತ್ತಮ ಸಂಸ್ಥೆಯಾಗಿ ಕೆಲಸ ನಿರ್ವಹಿಸಲೆಂದು ಹಾರೈಸಿದರು. |
| 9 | ಅಧ್ಯಕ್ಷರ ಭಾಷಣ | ಸಂಘದ ಅಧ್ಯಕ್ಷರು ಹಾಗೂ ಸಭೆಯ ಅಧ್ಯಕ್ಷರೂ ಆದ ಸನ್ಮಾನ್ಯ ಶ್ರೀ ಎಸ್.ಎಂ. ಲಿಂಗಪ್ಪನವರು ಭಾಷಣ ಮಾಡುತ್ತಾ ಈ ಸಂಸ್ಥೆಯು ಒಂಭತ್ತು ವರ್ಷಗಳಲ್ಲಿ ಗಳಿಸಿರುವ ಕೀರ್ತಿ ಮತ್ತು ಪ್ರಸಂಸೆಗಳಿಗೆ ಮುಂಚಿತವಾಗಿ ಈ ಸಂಸ್ಥೆಯನ್ನು ಬೆಳೆಸಲು ನೆರವಾದ ಸದಸ್ಯ ಮಹಾಶಯರುಗಳನ್ನು ನೆನೆದರು. ಗ್ರಾಮಾಂತರ ಪ್ರದೇಶದಿಂದ ಬರುವ ಬಡ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯಿಂದ ವಿದ್ಯಾರ್ಥಿಗಳು ಪೂರ್ಣ ಪ್ರಯೋಜನ ಹೊಂದಿ ತನ್ಮೂಲಕ ರಾಷ್ಟ್ರದ ಉತ್ತಮ ಪ್ರಜೆಗಳಾಗಲಿ ಎಂದು ಹಾರೈಸಿದರು. ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ವಿದ್ಯಾಭ್ಯಾಸ ಒದಗಿಸುವಂತೆ ಈ ಶಾಲೆಯ ಅಧ್ಯಾಪಕರುಗಳಿಗೆ ಸೂಚಿಸಿ, ವಿದ್ಯಾರ್ಥಿಗಳ ಕಲ್ಯಾಣವೆ |

| | | |
|---|---|---|
| | | ಅಧ್ಯಾಪಕರ ಗುರಿಯಾಗಬೇಕೆಂದು ಅವರು ಕರೆ ನೀಡಿದರು. ಇಲ್ಲಿಯವರೆಗೆ ಧನ ಸಹಾಯ ಒದಗಿಸಿದಂತೆ ಮುಂದೆಯು ಸಹ ಧನ ಸಹಾಯ ಒದಗಿಸಿ ತನ್ಮೂಲಕ ಈ ಸಂಸ್ಥೆಯನ್ನು ಬೆಳೆಸಲು ಅನುವು ಮಾಡಿಕೋಡಬೇಕೆಂದು ಕೋರಿದರು. |
| 10 | ವಂದನಾರ್ಪಣೆ | ಸಂಸ್ಥೆಯ ಕಾರ್ಯದರ್ಶಿಯಾದ ಶ್ರೀ.ಜಿ.ನಾರಾಯಣ ಶೆಟ್ಟರು ಸಭಾಧ್ಯಕ್ಷರನ್ನು ಸಭೆಗೆ ಆಗಮಿಸಿರುವ ಸದಸ್ಯರುಗಳನ್ನು ವಂದಿಸಿದರು. |
| 11 | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಭರಕಾಸ್ತು ಮಾಡಲಾಯ್ತು. |

(ಎಸ್.ಎಂ. ಲಿಂಗಪ್ಪ)

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ.

ಕೃಷ್ಣರಾಜಪೇಟೆ.

## ಮಹಾಸಭೆ: 9

ತಾರೀಖು:15–5–1984 ರ ಮಂಗಳವಾರ ಬೆಳಿಗ್ಗೆ 11–30 ಘಂಟೆಗೆ ಸರಿಯಾಗಿ ಗ್ರಾಮಭಾರತಿ ವಿದ್ಯಾ ಸಂಸ್ಥೆಯ ಮಹಾಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಸ್.ಎಂ. ಲಿಂಗಪ್ಪನವರು ಬಿ.ಎ. ಎಲ್.ಎಲ್.ಬಿ. ಇವರ ಘನ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1 | ದೇವತಾ ಪ್ರಾರ್ಥನೆ | ಕುಮಾರಿ ಸಂಧ್ಯಾರಾಣಿಯಿಂದ ಪ್ರಾರ್ಥನೆಯಾಯಿತು. |
| 2 | ಸ್ವಾಗತ ಭಾಷಣ | ಸಂಸ್ಥೆಯ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾದ ಶ್ರೀ.S.C ಚಿಕ್ಕಣ್ಣಗೌಡರು, ಸಭಾಧ್ಯಕ್ಷರನ್ನು ಸಭೆಗೆ ಆಗಮಿಸಿದ್ದ ಆಹ್ವಾನಿತರನ್ನು ಸ್ವಾಗತಿಸಿದರು. |
| 3 | ಸಕಲ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರಿಕಾರ್ಡು ಮಾಡುವುದು. | ಆಹ್ವಾನ ಪತ್ರಿಕೆಯನ್ನು ಓದಲಾಯ್ತು. ರಿಕಾರ್ಡ ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 4 | ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಯನ್ನು ಓದಿ ರಿಕಾರ್ಡು ಮಾಡುವುದು. | ಓದಲಾಯ್ತು. ರಿಕಾರ್ಡ ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 5 | ವಿದ್ಯಾ ಸಂಸ್ಥೆಯ ಆಡಳಿತ ವರದಿಯನ್ನು ಓದಿ ರಿಕಾರ್ಡು ಮಾಡತಕ್ಕ ವಿಚಾರ. | ಆಡಳಿತ ವರದಿಯನ್ನು ಓದಲಾಯ್ತು ರಿಕಾರ್ಡು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 6 | 1982–83 ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 1982–83 ನೇ ಸಾಲಿನ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಪರಿಶೀಲಿಸಲಾಯ್ತು. ಇದನ್ನು ಅಂಗೀಕರಿಸಬಹು ದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯ್ತು ಹಾಗೂ ಆಡಿಟ್‌ರವರಿಗೆ ಹಾಲಿ ಫೀಸು ಕೊಡುತ್ತಿದ್ದುದರ ಜತೆಗೆ ಇನ್ನು ಒಂದು ನೂರು ರೂಪಾಯಿಗಳನ್ನು ಸಹ ಕೊಡಬಹುದೆಂದು ತೀರ್ಮಾನಿಸಲಾಯ್ತು. |

| | | |
|---|---|---|
| 7 | 1984–85 ನೇ ಸಾಲಿಗೆ ಬಡ್ಜೆಟ್ ಮಂಜೂರು ಮಾಡತಕ್ಕ ವಿಚಾರ. | 1. ಸಿಬ್ಬಂದಿ ಸಂಬಳ ರೂ 10,000=00<br>2. ಮ್ಯಾಚಿಂಗ್ ಗ್ರ್ಯಾಂಟ್ 5,000=00<br>3. ವಿಜ್ಞಾನ ಉಪಕರಣಗಳು 10,000=00<br>4. ಪುಸ್ತಕ ಬಂಢಾರ 10,000=00<br>5. ಮಹಾಸಭೆ ಖರ್ಚು 1,000=00<br>6. ಪ್ರಯಾಣ ಭತ್ಯೆ 500=00<br>7. ಅತಿಥಿ ಸತ್ಕಾರ 200=00<br>8. ಅಂಚೆ ವೆಚ್ಚ. 500=00<br>9. ಅನಿರೀಕ್ಷಿತ ವೆಚ್ಚಗಳು 5,000=00<br>10. ಜಾಹಿರಾತುಗಳಿಗಾಗಿ 300=00<br>**ಜುಮ್ಲಾ ರೂ 42,500=00**<br>ಮೇಲ್ಕಂಡ ರೂ 42,500=00 ರೂಗಳ ಬಡ್ಜೆಟ್ ನ್ನು ಮಂಜೂರು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 8 | ಸಂಸ್ಥೆಯ ಕಾರ್ಯನಿರ್ವಹಣೆ ಮಂಡಲಿಯ ಚುನಾವಣೆ | ಈ ವಿಚಾರವನ್ನು ಸಂಸ್ಥೆಯ ಅಧ್ಯಕ್ಷರ ಜವಾಬ್ಧಾರಿಗೆ ಬಿಟ್ಟು ಸೂಕ್ತರಾದವರನ್ನು ಆರಿಸಿಕೊಂಡು ಕಾರ್ಯಕಾರಿ ಮಂಡಲಿಯನ್ನು ರಚಿಸಿಕೊಂಡು ಕಾರ್ಯ ನಿರ್ವಹಿಸುವಂತೆ ಪೂರ್ಣ ಅಧಿಕಾರವನ್ನು ಸಂಸ್ಥೆಯ ಅಧ್ಯಕ್ಷರಿಗೆ ನೀಡಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 9 | ಭಾಷಣಗಳು | ಸಂಸ್ಥೆಯ ಸದಸ್ಯರಾದ ಶ್ರೀ K.U. ರಾಮಯ್ಯನವರು ಭಾಷಣ ಮಾಡುತ್ತಾ ದಾನ ದಾನಗಳಲ್ಲಿ ಶ್ರೇಷ್ಠವಾದ ವಿದ್ಯಾದಾನವನ್ನು ಈ ಸಂಸ್ಥೆಯು ನಿರ್ವಹಿಸುತ್ತಿದ್ದು, ತನ್ಮೂಲಕ ಇಲ್ಲಿನ ವಿದ್ಯಾರ್ಥಿಗಳ ನಾಳಿನ ಭವಿಷ್ಯಕ್ಕೆ |

| | | |
|---|---|---|
| | | ಬುನಾದಿ ಹಾಕಿಕೊಟ್ಟಿರುವ ಸನ್ಮಾನ್ಯ ಶ್ರೀ.ಎಸ್.ಎಂ. ಲಿಂಗಪ್ಪನವರ ಸೇವೆಯನ್ನು ಪ್ರಶಂಸಿಸಿದರು. |
| 10 | ಅಧ್ಯಕ್ಷರ ಭಾಷಣ | ಸಂಸ್ಥೆಯ ಅಧ್ಯಕ್ಷರೂ ಹಾಗೂ ಸಭೆಯ ಅಧ್ಯಕ್ಷರೂ ಆದ ಸನ್ಮಾನ್ಯ ಶ್ರೀ ಎಸ್.ಎಂ. ಲಿಂಗಪ್ಪನವರು ಭಾಷಣ ಮಾಡುತ್ತಾ ಈ ಸಂಸ್ಥೆಯ ಪುರೋಭಿವೃದ್ದಿಗಾಗಿ ಆಡಳಿತ ಮಂಡಲಿ ಹಾಗೂ ಅಧ್ಯಾಪಕ ವೃಂದದವರು ಸಹ ಜತೆಗೂಡಿ ಶ್ರಮ ಪಡಬೇಕೆಂದು ಸೂಚಿಸಿದರು. ಇಲ್ಲಿಯವರೆಗೆ ಬಂದಿರುವ ಫಲಿತಾಂಶವನ್ನು ನೆನಪಿನಲ್ಲಿಟ್ಟುಕೊಂಡು ಶೇಕಡಾ ನೂರು ಫಲಿತಾಂಶ ಬರಲು ಶ್ರಮ ವಹಿಸುವಂತೆ ಅದ್ಯಾಪಕರಿಗೆ ಸೂಚಿಸಿದರು ಫಲಿತಾಂಶವು ನೈತಿಕವಾಗಿದ್ದು, ಯಾವುದೇ ಅನೈತಿಕ ವ್ಯವಹಾರವೂ ಇದರಲ್ಲಿ ಸುಳಿಯ ಕೂಡದೆಂದು ತಿಳಿಸಿದರು. ನೈತಿಕ ಅಧಃಪತನವನ್ನು ಅವರು ತೀರ್ವವಾಗಿ ಖಂಡಿಸಿದರು. ಇಲ್ಲಿನವರೆಗೆ ಸಲ್ಲಿಸಿರುವ ಧನ ಸಹಾಯಕ್ಕಿಂತ ಇನ್ನು ಮುಂದೆ ಹೊಸದಾಗಿ ಕಟ್ಟಲ್ಪಡಬೇಕಾಗಿರುವ ಶಾಲೆಯ ಹೊಸ ಕಟ್ಟಡಕ್ಕೆ ಹೆಚ್ಚಿನ ಧನ ಸಹಾಯ ಮಾಡುವಂತೆ ಕೋರಿದರು. ಧನ ಸಹಾಯ ಮಾಡಿರುವ ಎಲ್ಲರಿಗೂ ತಮ್ಮ ಕೃತಜ್ಞತೆ ಸಲ್ಲಿಸಿದರು. ಶಿಕ್ಷಣದ ಗುಣಮಟ್ಟ ತೀವ್ರವಾಗಿ ಕುಸಿದಿರುವ ಈ ದಿನಗಳಲ್ಲಿ ಈ ಸಂಸ್ಥೆಯಿಂದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವಂತೆ ಅಧ್ಯಾಪಕರಿಗೆ ಸೂಚಿಸಿದರು. ಗ್ರಾಮಾಂತರ ಪ್ರದೇಶದ ಹಿಂದುಳಿದವರ, ಅಲ್ಪಸಂಖ್ಯಾತರ ವಿದ್ಯಾ ಏಳ್ಗೆಯನ್ನು ಮನಸಿನಲ್ಲಿಟ್ಟು ಕೊಂಡು ಸ್ಥಾಪಿಸಿರುವ ಈ ವಿದ್ಯಾಸಂಸ್ಥೆಯಿಂದ ಪೂರ್ಣ ಪ್ರಯೋಜನ ಅವರಿಗೆ ದೊರೆಯಲಿ ಎಂದು |

| | | |
|---|---|---|
| | | ಹಾರೈಸಿದರು. ಅಗ್ಗದ ಜನಪ್ರಿಯತೆಗಾಗಿ ಈ ಸಂಸ್ಥೆಯನ್ನು ಬಳಸಿಕೊಳ್ಳದೆ. ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವಂತೆ ಅಧ್ಯಾಪಕರಿಗೆ ಕರೆ ನೀಡಿದರು. |
| 11 | ವಂದನಾರ್ಪಣೆ | ಸಂಸ್ಥೆಯ ಕಾರ್ಯದರ್ಶಿಯವರು ಶ್ರೀ.ಜಿ.ನಾರಾಯಣ ಶೆಟ್ಟರವರು ಸಭಾಧ್ಯಕ್ಷರನ್ನು ಸಭೆಗೆ ಆಗಮಿಸಿರುವ ಸದಸ್ಯರನ್ನು ಆಹ್ವಾನಿತರನ್ನು ವಂದಿಸಿದರು. |
| 12 | ರಾಷ್ಟ್ರಗೀತೆ | ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಭರಕಾಸ್ತು ಮಾಡಲಾಯ್ತು. |

(ಎಸ್.ಎಂ. ಲಿಂಗಪ್ಪ)

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ.

ಕೃಷ್ಣರಾಜಪೇಟೆ.

# ಮಹಾಸಭೆ: 10

ತಾರೀಖು:21–5–1985 ರ ಮಂಗಳವಾರದಂದು ಬೆಳಿಗ್ಗೆ 11–30 ಘಂಟೆಗೆ ಸರಿಯಾಗಿ ಗ್ರಾಮಭಾರತಿ ವಿದ್ಯಾ ಸಂಸ್ಥೆಯ ಮಹಾಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಸ್.ಎಂ. ಲಿಂಗಪ್ಪ ಬಿ.ಎ. ಎಲ್.ಎಲ್.ಬಿ. ಇವರ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1 | ದೇವತಾ ಪ್ರಾರ್ಥನೆ | ದೇವತಾ ಪ್ರಾರ್ಥನೆಯಾಯಿತು. |
| 2 | ಸ್ವಾಗತಭಾಷಣ | ಸಂಸ್ಥೆಯ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾದ ಶ್ರೀ.S.C ಚಿಕ್ಕಣ್ಣಗೌಡರು, ಸಭಾಧ್ಯಕ್ಷರನ್ನು ಸಭೆಗೆ ಆಗಮಿಸಿದ್ದ ಆಹ್ವಾನಿತರನ್ನು ಸ್ವಾಗತಿಸಿದರು. |
| 3 | ಸಕಲ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರಿಕಾರ್ಡು ಮಾಡುವುದು. | ಆಹ್ವಾನ ಪತ್ರಿಕೆಯನ್ನು ಓದಲಾಯ್ತು. ರಿಕಾರ್ಡ ಮಾಡ–ಬಹುದೆಂದು ಸರ್ವಾನುಮತದಿಂದ ತೀರ್ಮಾನಿ–ಸಲಾಯ್ತು. |
| 4 | ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ರಿಕಾರ್ಡು ಮಾಡುವುದು. | ಓದಲಾಯ್ತು. ರಿಕಾರ್ಡ ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 5 | ವಿದ್ಯಾ ಸಂಸ್ಥೆಯ ಆಡಳಿತ ವರದಿಯನ್ನು ಓದಿ ರಿಕಾರ್ಡು ಮಾಡತಕ್ಕ ವಿಚಾರ. | ಓದಿ ರಿಕಾರ್ಡು ಮಾಡಲಾಯ್ತು. |
| 6 | 1983–84 ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವ ವಿಚಾರ. | 1983–84 ನೇ ಸಾಲಿನ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಪರಿಶೀಲಿಸಲಾಯ್ತು. ಇದನ್ನು ಅಂಗೀಕರಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 7 | 1985–86 ನೇ ಸಾಲಿಗೆ ಸಂಸ್ಥೆಯ ಬಡ್ಜೆಟ್ ಮಂಜೂರ್ಮಾಡತಕ್ಕ ವಿಚಾರ. | 1. ಸಿಬ್ಬಂದಿ ಸಂಬಳಕ್ಕಾಗಿ 10,000=00<br>2. ಮ್ಯಾನೆಜಿಂಗ್ ಗ್ರ್ಯಾಂಟ್ 5,000=00<br>3. ವಿಜ್ಞಾನ ಉಪಕರಣಗಳು 10,000=00 |

| | | |
|---|---|---|
| | | 4. ಪುಸ್ತಕ ಬಂಢಾರ 10,000=00<br>5. ಮಹಾಸಭೆ ಖರ್ಚು 1000=00<br>6. ಪ್ರಯಾಣ ಭತ್ಯೆ 500=00<br>7. ಅತಿಥಿ ಸತ್ಕಾರ 200=00<br>8. ಅಂಚೆ ವೆಚ್ಚ. 500=00<br>9. ಅನಿರೀಕ್ಷಿತ ವೆಚ್ಚಗಳು 5,000=00<br>10. ಜಾಹಿರಾತುಗಳು 300=00<br>11. ಬಾಡಿಗೆಗಾಗಿ 10,000=00<br>ಜುಮ್ಲಾ ರೂ 52,500=00<br>ಮೇಲ್ಕಂಡ ರೂ (52,500=00) ರೂಗಳ ಬಡ್ಜೆಟ್ ಮಂಜೂರು ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 8 | ಸಂಸ್ಥೆಯ ಕಾರ್ಯನಿರ್ವಹಕ ಮಂಡಳಿಯ ಚುನಾವಣೆ | ಈ ವಿಚಾರವನ್ನು ಸಂಸ್ಥೆಯ ಅಧ್ಯಕ್ಷರ ಜವಾಬ್ಧಾರಿಗೆ ಬಿಟ್ಟು ಸೂಕ್ತರಾದವರನ್ನು ಆರಿಸಿಕೊಂಡು ಕಾರ್ಯಕಾರಿ ಮಂಡಳಿಯನ್ನು ರಚಿಸಿಕೊಂಡು ಕಾರ್ಯನಿರ್ವಹಿಸು ವಂತೆ ಪೂರ್ಣ ಅಧಿಕಾರವನ್ನು ಸಂಸ್ಥೆಯ ಅಧ್ಯಕ್ಷರಿಗೆ ನೀಡಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 9 | ಇತರೆ ವಿಚಾರಗಳು | ಸಂಘದ ಸದಸ್ಯರಾದ ಶ್ರೀಮಾನ್ ಜಿ ರಾಮೇಗೌಡರು ಹೆಚ್ಚುವರಿ ತರಗತಿಯನ್ನು ತೆರೆಯಬೆಕೆಂದು ಸಲಹೆ ಮಾಡಿದರು. |
| 10 | ಅಧ್ಯಕ್ಷರ ಭಾಷಣ | ಸಂಸ್ಥೆಯ ಅಧ್ಯಕ್ಷರೂ ಸಭಾಧ್ಯಕ್ಷರೂ ಆದ ಸನ್ಮಾನ್ಯ ಶ್ರೀಮಾನ್ ಎಸ್.ಎಂ. ಲಿಂಗಪ್ಪನವರು ಭಾಷಣ ಮಾಡುತ್ತಾ ಈ ಸಂಸ್ಥೆಯ ಪುರೋಭಿವೃದ್ದಿಗಾಗಿ ಆಡಳಿತ |

| | | |
|---|---|---|
| | | ಮಂಡಳಿ ಹಾಗೂ ಅಧ್ಯಾಪಕ ವೃಂದದವರು ಸಹ ಜತೆಗೂಡಿ ಶ್ರಮ ಪಡಬೇಕೆಂದು ಸೂಚಿಸಿದರು. ಸಂಸ್ಥೆಯ ಪುರೋಭಿವೃದ್ಧಿಗಾಗಿ ಎಲ್ಲರೂ ಹೆಚ್ಚಿನ ರೀತಿಯಲ್ಲಿ ಶ್ರಮವಹಿಸಬೇಕೆಂದು ಸೂಚಿಸಿದರು ಸಂಸ್ಥೆಯ ಹಿತಕ್ಕೆ ಸದಾ ಅಧ್ಯಾಕ ವೃಂದದವರು ಹೆಚ್ಚಿನ ರೀತಿಯಲ್ಲಿ ದುಡಿದು ಸಂಸ್ಥೆಯ ಹಿತವನ್ನು ಕಾಪಾಡಬೇಕೆಂದು ಸೂಚಿಸಿದರು.<br>ವಿದ್ಯಾ ಏಳಿಗೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸ್ಥಾಪಿಸಿರುವ ಈ ವಿದ್ಯಾಯಿಂದ ಪೂರ್ಣ ಪ್ರಯೋಜನ ಅವರಿಗೆ ದೊರೆಯಲಿ ಎಂದು ಹಾರೈಸಿದರು ಪ್ರಾಮಾಣಿಕ ವಾಗಿ ಕೆಲಸ ಮಾಡುವಂತೆ ಅಧ್ಯಾಪಕರಿಗೆ ಕರೆ ನೀಡಿದರು. |
| 11 | ವಂದನಾರ್ಪಣೆ | ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ˛G ನಾರಾಯಣಶೆಟ್ಟರವರು ಸಭಾಧ್ಯಕ್ಷರನ್ನು ಸಭೆಗೆ ಆಗಮಿ ಸಿದ್ದ ಸದಸ್ಯರನ್ನು ಆಹ್ವಾನಿತರನ್ನು ವಂದಿಸಿದರು. |
| 12 | ರಾಷ್ಟ್ರಗೀತೆ | ಸಭೆಯು ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಭರಕಾಸ್ತು ಮಾಡಲಾಯ್ತು. |

(ಎಸ್.ಎಂ. ಲಿಂಗಪ್ಪ)

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ.

ಕೃಷ್ಣರಾಜಪೇಟೆ.

# ಮಹಾಸಭೆ: 11

ತಾರೀಖು:27–5–1986 ರ ಮಂಗಳವಾರದಂದು ಬೆಳಿಗ್ಗೆ 11–00 ಘಂಟೆಗೆ ಸರಿಯಾಗಿ ಗ್ರಾಮಭಾರತಿ ವಿದ್ಯಾ ಸಂಸ್ಥೆಯ ಮಹಾಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಎಸ್.ಎಂ. ಲಿಂಗಪ್ಪ ಬಿ.ಎ. ಎಲ್.ಎಲ್.ಬಿ. ರವರ ಅಧ್ಯಕ್ಷತೆಯಲ್ಲಿ ಸೇರಿ ನಡೆಸಿದ ಮೀಟಿಂಗ್ ನಡವಳಿಕೆಗಳು.

| | ವಿಷಯ | ತೀರ್ಮಾನ |
|---|---|---|
| 1 | ದೇವತಾ ಪ್ರಾರ್ಥನೆ | |
| 2 | ಸ್ವಾಗತಭಾಷಣ | ಸಂಸ್ಥೆಯ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾದ ಶ್ರೀ S.C.ಚಿಕ್ಕಣ್ಣಗೌಡರು, ಸಭಾಧ್ಯಕ್ಷರನ್ನು ಸಭೆಗೆ ಆಗಮಿಸಿದ್ದ ಆಹ್ವಾನಿತರನ್ನು ಸ್ವಾಗತಿಸಿದರು. |
| 3 | ಸಕಲ ಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ರಿಕಾರ್ಡು ಮಾಡುವುದು. | ಆಹ್ವಾನ ಪತ್ರಿಕೆಯನ್ನು ಓದಿ ರಿಕಾರ್ಡ ಮಾಡಲಾಯ್ತು. |
| 4 | ವಿದ್ಯಾ ಸಂಸ್ಥೆಯ ಆಡಳಿತ ವರದಿಯನ್ನು ಓದಿ ರಿಕಾರ್ಡು ಮಾಡತಕ್ಕ ವಿಚಾರ. | ಓದಿ ರಿಕಾರ್ಡು ಮಾಡಲಾಯ್ತು. |
| 5 | ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ರಿಕಾರ್ಡು ಮಾಡತಕ್ಕ ವಿಚಾರ. | ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ಸರ್ವಾನುಮತದಿಂದ ಅಂಗೀಕರಿಸಲಾಯ್ತು. |
| 6 | 1984–85 ನೇ ಸಾಲಿನ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವ ವಿಚಾರ. | 1984–85 ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯೊಂದಿಗೆ ಪರಿಶೀಲಿಸಲಾಯ್ತು. ಇದನ್ನು ಅಂಗೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |

| | | |
|---|---|---|
| 7 | 1984–85 ನೇ ಸಾಲಿನಲ್ಲಿ ಮಂಜೂರಾಗಿರುವ ಬಡ್ಜೆಟ್ಟಿಗಿಂತ ಮಹಾಸಭೆಯ ಖರ್ಚು ಹೆಚ್ಚಾಗಿರುವುದರಿಂದ ಹೆಚ್ಚಾಗಿ ಖರ್ಚಾಗಿರುವ 261–15 ಪೈಸೆಗಳನ್ನು ಒಪ್ಪಿ ಅನುಮೋದಿಸತಕ್ಕ ವಿಚಾರ. | ಬಡ್ಜೆಟ್ಟಿಗಿಂತ ಹೆಚ್ಚಾಗಿ ಖರ್ಚಾಗಿರುವುದರಿಂದ ಒಪ್ಪಿ ಮಂಜೂರ್ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 8 | 1986–87 ನೇ ಸಾಲಿಗೆ ಸಂಸ್ಥೆಯ ಬಡ್ಜೆಟ್ ಮಂಜೂರ್ಮಾಡತಕ್ಕ ವಿಚಾರ. | 1. ಸಿಬ್ಬಂದಿ ಸಂಬಳ 10,000=00<br>2. ವಿಜ್ಞಾನ ಉಪಕರಣಗಳು 5,000=00<br>3. ಪುಸ್ತಕ ಬಂಢಾರ 5,000=00<br>4. ಮಹಾಸಭೆ ಖರ್ಚು 2000=00<br>5. ಪ್ರಯಾಣ ಭತ್ಯೆ 500=00<br>6. ಅನಿರೀಕ್ಷಿತ ವೆಚ್ಚಕ್ಕಾಗಿ 2,000=00<br>7. ಜಾಹಿರಾತುಗಳಿಗಾಗಿ 1,000=00<br>8. ಬಾಡಿಗೆಗಾಗಿ 10,000=00<br>9. ಅಂಚೆ ವೆಚ್ಚ 500=00<br>ಜುಮ್ಲಾ ರೂ 36,000=00 |
| 9 | ಸಂಸ್ಥೆಯ ಕಾರ್ಯನಿರ್ವಹಕ ಮಂಡಳಿಯ ಚುನಾವಣೆ | ಈ ವಿಚಾರವನ್ನು ಸಂಸ್ಥೆಯ ಅಧ್ಯಕ್ಷರ ಜವಾಬ್ಧಾರಿಗೆ ಬಿಟ್ಟು ಸೂಕ್ತರಾದವರನ್ನು ಆರಿಸಿಕೊಂಡು ಕಾರ್ಯಕಾರಿ ಮಂಡಳಿಯನ್ನು ರಚಿಸಿಕೊಂಡು ಕಾರ್ಯನಿರ್ವಹಿಸುವಂತೆ ಪೂರ್ಣ ಅಧಿಕಾರವನ್ನು ಸಂಸ್ಥೆಯ ಅಧ್ಯಕ್ಷರಿಗೆ ನೀಡತಕ್ಕದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |
| 10 | ಈ ಕೆಳಗೆ ನಮೂದಿಸಿರುವ ವಿಷಯಗಳನ್ನು ಸರ್ವ ಸದಸ್ಯರ ಸಭೆಯಲ್ಲಿ ಚರ್ಚಗೆ ತೆಗೆದುಕೊಳ್ಳಲಾಯ್ತು. | ಎಲ್ಲವನ್ನು ವಿಚಾರಣೆ ಮಾಡಿ ಎಚ್ಚರಿಕೆ ಕೊಟ್ಟು ಅಗತ್ಯವಾದಲ್ಲಿ ಶಿಸ್ತಿನ ಕ್ರಮ ಜರುಗಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. |

| | | |
|---|---|---|
| | (ಅ) ಅಧ್ಯಾಪಕರುಗಳು ಸಕಾಲದಲ್ಲಿ ಶಾಲೆಗೆ ಬಂದು ಪಾಠಪ್ರವಚನಗಳನ್ನು ನಡೆಸದೆ ಬೆಜವಾಬ್ದಾರಿಯಿಂದ ವರ್ತಿಸಿರುವ ವಿಷಯ.<br>(ಆ) ಉಪಾಧ್ಯಾಯರುಗಳು ಶಾಲೆಯ ವಿದ್ಯಾರ್ಥಿಗಳಿಂದ ಹಣ ಪಡೆದು ಕೊಡದೆ ಇರುವ ಅಧ್ಯಾಪಕರಗಳ ಪ್ರಕರಣ.<br>(ಇ) ಉಪಾಧ್ಯಾಯರುಗಳು ಸಕಾಲಕ್ಕೆ ಪಾಠ ಪ್ರವಚನಗಳನ್ನು ಮುಗಿಸದೆ ಇರುವ ಪ್ರಕರಣ. | |
| 11 | ಅಧ್ಯಕ್ಷರ ಭಾಷಣ | ಸಂಸ್ಥೆಯ ಅಧ್ಯಕ್ಷರೂ ಹಾಗೂ ಸಭಾಧ್ಯಕ್ಷರೂ ಆದ ಸನ್ಮಾನ್ಯ ಶ್ರೀಮಾನ್ ಎಸ್.ಎಂ. ಲಿಂಗಪ್ಪನವರು ಭಾಷಣ ಮಾಡುತ್ತಾ ಈ ಸಂಸ್ಥೆಯ ಪುರೋಭಿವೃದ್ದಿಗಾಗಿ ಆಡಳಿತ ಮಂಡಳಿ ಹಾಗೂ ಅಧ್ಯಾಪಕರ ವೃಂದದವರು ಸಹ ಜತೆಗೂಡಿ ಶ್ರಮ ಪಡಬೇಕೆಂದು ಸೂಚಿಸಿದರು.<br>ಸಂಸ್ಥಯ ಪುರೋಭಿವೃದ್ಧಿಗಾಗಿ ಎಲ್ಲರೂ ಹೆಚ್ಚಿನ ರೀತಿಯಲ್ಲಿ ಶ್ರಮವಹಿಸಬೇಕೆಂದು ಸೂಚಿಸಿದರು. ಸಂಸ್ಥೆಯ ಹಿತಕ್ಕೆ ಸದಾ ಅಧ್ಯಾಕ ವೃಂದದವರು ಹೆಚ್ಚಿನ ರೀತಿಯಲ್ಲಿ ದುಡಿದು ಸಂಸ್ಥೆಯ ಹಿತವನ್ನು ಕಾಪಾಡಬೇಕೆಂದು ಸೂಚಿಸಿದರು.<br>ವಿದ್ಯಾ ಏಳಿಗೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸ್ಥಾಪಿಸಿರುವ ಈ ವಿದ್ಯಾಯಿಂದ ಪೂರ್ಣ ಪ್ರಯೋಜನ ಅವರಿಗೆ ದೊರೆಯಲಿ ಎಂದು ಹಾರೈಸಿದರು |

| | | |
|---|---|---|
| | | ಪ್ರಾಮಾಣಿಕವಾಗಿ ಕೆಲಸ ಮಾಡುವಂತೆ ಅಧ್ಯಾಪಕರಿಗೆ ಕರೆನೀಡಿದರು.<br>ಸಂಸ್ಥೆಯ ಹಿತ ದೃಷ್ಟಿಯಿಂದ ಎಲ್ಲರೂ ಶ್ರಮವಹಿಸ ತಕ್ಕದೆಂದು ಸತ್ಯವಾಗಿ ಪ್ರಮಾಣಿಕವಾಗಿ ದುಡಿಯುವಂತೆ ಮಾರ್ಗದರ್ಶನವನ್ನು ಅಧ್ಯಾಪಕರುಗಳಿಗೆ ಕರೆ ನೀಡಿದರು |
| 12 | ವಂದನಾರ್ಪಣೆ | ಸಂಸ್ಥೆಯ ಸದಸ್ಯರಾದ ಶ್ರೀಮಾನ್ ಬಿ.ಎಲ್. ಲಕ್ಷ್ಮಿಪತಿ ಜೋಯಿಸ್ ರವರು  ಸಭಾಧ್ಯಕ್ಷರನ್ನು ಹಾಗೂ ಸಭೆಗೆ ಆಗಮಿಸಿದ್ದ ಸದಸ್ಯರನ್ನು ಆಹ್ವಾನಿತರನ್ನು ವಂದಿಸಿದರು. |
| 13 | ರಾಷ್ಟ್ರಗೀತೆ | ಸಭೆಯು ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಭರಕಾಸ್ತು ಮಾಡಲಾಯ್ತು. |

(ಎಸ್.ಎಂ. ಲಿಂಗಪ್ಪ)

ಅಧ್ಯಕ್ಷ

ಗ್ರಾಮಭಾರತಿ ವಿದ್ಯಾಸಂಸ್ಥೆ.

ಕೃಷ್ಣರಾಜಪೇಟೆ.